ನಾರಾಯಣಭಟ್ಟರು, ಭಾಟಿಯಾರ ಮುಂದಾಳತ್ವದಲ್ಲಿ ಹಳ್ಳಿಯ ಅರ್ಧಭಾಗ ನಿಂತಿದ್ದರೆ, ಬಲಭಾಗದಲ್ಲಿ ಇಮಾಂಸಾಹೇಬರು, ಹುಸೇನ್, ಬುಡನ್‌ಸಾಬರ ನೇತೃತ್ವದಲ್ಲಿ ಹಳ್ಳಿಯ ಇನ್ನೊಂದು ಭಾಗ ನಿಂತಿತ್ತು. ಎಲ್ಲರಲ್ಲೂ ಏನಾಗುತ್ತದೆಂಬ ಭಯವಿದ್ದರೂ ಏನಾಗಿ ಬಿಡುತ್ತದೆ ನೋಡಿಯೇ ಬಿಡೋಣ ಎಂಬಂಥ ಹುಚ್ಚು ಧೈರ್ಯ, ಕುತೂಹಲಗಳು ಇದ್ದವು.

ಎಸ್.ಪಿ. ಸಾಹೇಬರು ಧ್ವನಿವರ್ಧಕ ಹಿಡಿದು ಎಲ್ಲರಿಗೂ ಕೇಳುವಂತೆ ಒಂದು ಭಾಷಣ ಮಾಡಿ, ಯಾರಿಗೂ ಅನ್ಯಾಯವಾಗದಂತೆ ನೋಡಿಕೊಂಡು, ನೊಂದವರ ಕುಟುಂಬಕ್ಕೆ ಸರ್ಕಾರದಿಂದ ಪರಿಹಾರ ಕೊಡಿಸಿ, ಹುಡುಗಿಯ ಸಾವಿಗೆ ಕಾರಣವಾದವರ ಮೇಲೆ ಕಠಿಣ ಕ್ರಮ ಕೈಗೊಳ್ಳುವ ಭರವಸೆ ನೀಡಿ, ಎಲ್ಲರೂ ಶಾಂತ ರೀತಿಯಿಂದ ವರ್ತಿಸಬೇಕೆಂದು ಮನವಿ ಮಾಡಿ, ಕಪ್ಪುಕೆರೆಯಿಂದ ಹೆಣವನ್ನು ಮೇಲೆತ್ತುವ ಕಾರ್ಯಾಚರಣೆಗೆ ಅಪ್ಪಣೆ ಹೊರಡಿಸಿದರು. ಕೆರೆಯ ಎರಡೂ ಭಾಗದಲ್ಲಿ ನಿಂತು ಎರಡೂ ಗುಂಪುಗಳೂ ಮದವೇರಿ, ಕಾಳಗಕ್ಕೆ ಬಿಟ್ಟ ಹೋರಿಯ ಮನಃಸ್ಥಿತಿಯನ್ನು ಏಕಪ್ರಕಾರವಾಗಿ ಹೊಂದಿದ್ದವು.

ಪ್ರತಿಯೊಬ್ಬರಲ್ಲೂ ಯಾವ ಕ್ಷಣಕ್ಕೆ ಏನಾಗುತ್ತದೋ ಎಂಬ ಭಯದಲ್ಲೂ ಹೇಗೆ ಕೊಚ್ಚಲಿ, ಯಾರನ್ನ ಹೊಡೆಯಲಿ, ಹೇಗೆ ತಪ್ಪಿಸಿಕೊಳ್ಳಲಿ ಎಂಬ ಲೆಕ್ಕಾಚಾರವಿದ್ದರೂ ಉಸಿರು ಬಿಗಿ ಹಿಡಿದು ನೋಡುತ್ತಿದ್ದರು. ಆ ಕ್ಷಣದಲ್ಲಿ ಅಂಜುಂಭಾನು ಆ ಚಿಕ್ಕ ವಯಸ್ಸಿಗೇ ಪ್ರಾಣ ಕಳೆದುಕೊಂಡ ಘೋರ ಯಾತನೆಯ ಬಗ್ಗೆ ಅನುಕಂಪ, ಸಹಾನುಭೂತಿ, ಕಣ್ಣೀರು ಇರಲಿಲ್ಲ. ಎಲ್ಲರ ಕಂಗಳಲ್ಲೂ ಕೆಂಪುಸೂರ್ಯ ಮೂಡಿನಿಂತಿದ್ದ. ಖಾಕಿ ದಿರಿಸಿನವರ ಕಣ್ಣು ಬಲಭಾಗದ ಗುಂಪಿನ ಮೇಲೇ ಅಧಿಕವಾಗಿತ್ತು. ನೋವಿಲ್ಲದವರ ಆಕ್ರೋಶಕ್ಕಿಂತ ನೋವುಂಡವರ ಆಕ್ರೋಶ ಬಹಳ ವಿಪತ್ಕಾರಿಯಾದುದೆಂಬ ಅರಿವು ಅವರಿಗೆ ಇತ್ತು. ಅದನ್ನು ಕಂಡೂ ಕಾಣದಂತೆ ಹದ್ದು ಕಂಗಳಿಂದ ದೃಷ್ಟಿ ನೆಟ್ಟು ನೋಡುತ್ತಿದ್ದರು.

ಹೆಣವನ್ನು ಮೇಲೆತ್ತಿ ಕೆರೆಯ ಏರಿಯ ಮೇಲಿನ ಹುಲ್ಲಿನ ಮೇಲೆ ಮಲಗಿಸಿದ್ದೇ ತಡ ಬಲಭಾಗದ ಗುಂಪು 'ಹೋ' ಎಂದು ಅರಚಿತ್ತು. ಬುಡನ್‌ಸಾಬ್ ಮತ್ತವರ ಪತ್ನಿ ಹೆಣದ ಮೇಲೆ ತೊಪ್ಪನೆ ಬಿದ್ದರು.

ಈ ದುಃಖದ ಪ್ರದರ್ಶನ... ಅದು ಸಹಜವಾಗಿದ್ದರೂ... ಜನರ ಮನದ ಭಾವುಕತೆಯನ್ನು ಬಡಿದೆಚ್ಚರಿಸಿ ಇನ್ನಿಲ್ಲದ ಅನಾಹುತಕ್ಕೆ ಹಾದಿ ಮಾಡಿಕೊಡುತ್ತದೆಯೆಂಬ ಸೂಕ್ಷ್ಮದ ಅರಿವಿದ್ದ ಎಸ್.ಪಿ. ಸಾಹೇಬರು ಪಿ.ಸಿ.ಯೊಬ್ಬನಿಗೆ ಅವರನ್ನು ಹಿಂದಕ್ಕೆ ಎಳೆದುಕೊಳ್ಳುವಂತೆ ಸನ್ನೆ ಮಾಡಿ ಮುಂದೆ ಬಂದರು.

'ಇದು ಒಂದು ಹೆಣ್ಣು ಮಗಳ ಸಾವಾದರೂ ಆ ಸಾವಿನಲ್ಲಿ ಒಂದು ಊರಿನ ಅಳಿವು ಉಳಿವು ಇದೆ. ಇಲ್ಲಿ ಇರುವವರೆಲ್ಲಾ ರಾಕ್ಷಸರಲ್ಲ. ಒಬ್ಬಿಬ್ಬರು ಇರಬಹುದು. ಆ ರಾಕ್ಷಸರಿಗೆ ಸರಿಯಾದ ಶಿಕ್ಷೆ ಆಗೇ ಆಗುತ್ತೆ. ಇದು ಗಂಭೀರವಾದ ವಿಚಾರ. ವಿಚಾರಣೆ ಮುಗಿಯೋ ತನಕಾ, ಪೋಸ್ಟ್‌ಮಾರ್ಟಂ ಆಗೋ ತನಕಾ ಈಗಲೇ ಹೆಣಾ ಮುಟ್ಟಲಿಕ್ಕೆ ಅಧಿಕಾರ ಇಲ್ಲ' ಹೇಳಬೇಕಾದುದನ್ನು ಬಹಳ ನಾಜೂಕಾಗಿ ಹೇಳಿ ಮುಗಿಸಿದಾಗ ಬಲಭಾಗದ ಗುಂಪು ಮತ್ತೊಮ್ಮೆ 'ಹೋ' ಎಂದಿತು. ಮುನ್ನುಗ್ಗಿದ ಹುಸೇನನನ್ನು ಇಮಾಂಸಾಬರು ಹಿಂದಕ್ಕೆಳೆದುಕೊಂಡರು. ವ್ಯಾನಿನಲ್ಲಿ ಕುಳಿತ ಅಧಿಕಾರಿ ವಾಕಿ–ಟಾಕಿಯೊಂದಿಗೆ ಪರಿಸ್ಥಿತಿಯ ಬಿಗುವನ್ನು ಆತಂಕ, ಆತುರಗಳಿಂದ ವರದಿ ಮಾಡುತ್ತಲೇ ಇದ್ದ.

'ನನ್ನ ಮಗಳ ಮುಖಾನಾದರೂ ತೋರ್ಸಿ ಸಾಹೇಬ್ರೆ' ಎಲ್ಲ ಕೂಗುಗಳನ್ನು ಮೀರಿ ಅರಚಿದ